**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 663/2019**

ಸಿ ಡಬ್ಲ್ಯೂ –4

ಪಿ ಡಬ್ಲ್ಯೂ–6

| | | |
|---|---|---|
| **ಸಾಕ್ಷಿದಾರರ ಹೆಸರು** | : | ನೀಲಮ್ಮ |
| **ತಂದೆ/ಗಂಡನ ಹೆಸರು** | : | ಬಸಪ್ಪ ಬಾರ್ಕಿ |
| **ವಯಸ್ಸು** | : | 65 ವರ್ಷ |
| **ಉದ್ಯೋಗ** | : | ಮನೆಕೆಲಸ |
| **ವಾಸ** | : | ಕಾಕೋಳ |

**ದಿನಾಂಕಃ 14–08–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಶ್ರೀ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ ಕಾಕೋಳ ಬ್ಯಾಡಗಿ ರಸ್ತೆಯಲ್ಲಿ ಇರುವ ಶಾಲೆಯಲ್ಲಿ ನಾನು ಸ್ವೀಪರ್ ಕೆಲಸ ಮಾಡುತ್ತಿದ್ದೇನು. ಈಗ 4 ವರ್ಷಗಳಿಂದ ಕೆಲಸ ಬಿಟ್ಟಿರುತ್ತೇನೆ. ಆ ಶಾಲೆಯಲ್ಲಿ ಎನು ಕಳ್ಳತನ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಆದರೆ ಆ ಶಾಲೆಯ ಶಿಕ್ಷಕರು ಶಾಲೆಯಲ್ಲಿರುವ ಕಂಪ್ಯೂಟರ್ ಗಳು ಕಳುವು ಆಗಿದೆ ಎಂದು ಮಾತನಾಡುತ್ತಿದ್ದರು. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಹಾಗೂ ಮರು ಹೇಳಿಕೆಯನ್ನು ಕೊಟ್ಟಿಲ್ಲ. ಆರೋಪಿತರನ್ನು ನನಗೆ ಪೋಲಿಸರು ತೋರಿಸಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**`

ದಿನಾಂಕ 29–10–2018 ರಂದು ಬೆಳಿಗ್ಗೆ 08–15 ಗಂಟೆಯ ಸಮಯದಲ್ಲಿ ಶಾಲೆಯ ಕಾರ್ಯದರ್ಶಿ ಚಾಸಾ–1 ರವರು ಶಾಲೆಗೆ ಹೋಗಿ ಕೊಠಡಿಯ ಬೀಗ ತೆಗೆದು ನೋಡಿದಾಗ ಕಂಪ್ಯೂಟರ್ ಕಳುವು ಆಗಿದ್ದು ಈ ವಿಚಾರವಾಗಿ ಚಾಸಾ–5 ರಿಂದ ಚಾಸಾ–8 ರವರಿಗೆ ವಿಚಾರ ತಿಳಿಸಿ ನಂತರ ಶಾಲಾ ಆಡಳಿತ ಮಂಡಳಿಯವರಿಗೆ ವಿಚಾರ ತಿಳಿಸಿ ಪೋಲಿಸರಿಗೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸುಮಾರು 2 ತಿಂಗಳ ನಂತರ ಅಂದರೆ ದಿನಾಂಕ 12–

ಸಿ ಡಬ್ಲ್ಯೂ -4

ಪಿ ಡಬ್ಲ್ಯೂ-6

12-2018 ರಂದು ಪೋಲಿಸರು ಶಾಲೆಯ ಬಳಿ 3 ಜನ ಆರೋಪಿತರನ್ನು ಕರೆದುಕೊಂಡು ಬಂದು ಜಾಗವನ್ನು ತೋರಿಸಿದರು ನಮಗೂ ಸಹ ಕಳ್ಳತನ ಮಾಡಿದ ಆರೋಪಿತರನ್ನು ತೋರಿಸಿದರು ಎಂದರೆ ಸರಿಯಲ್ಲ. ನನಗೆ ಈಗ ಒದಿ ಹೇಳಿದಂತೆ 10 ಮತ್ತು ನಿ ಪಿ -11 ರಂತೆ ಪೋಲಿಸರಿಗೆ ಹೇಳಿಕೆ ಮತ್ತು ಮರು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.